ಅರೆಕಾಲಿಕ : 114
(ಕರಾರು ಆಧಾರ)

ಊ)

	94-95	95-96	96-97
ಸರ್ಕಾರಿ:	5968	6012	5912
ಖಾಸಗಿ:	8616	9940	10904

ಋ) **ಕೈಗಾರಿಕಾ ತರಬೇತಿ ಸಂಸ್ಥೆ:**

	94-95	95-96	96-97
ಮಂಜೂರಾದ ಅಧ್ಯಾಪಕರ ಸಂಖ್ಯೆ:	840	853	868
ಭರ್ತಿ ಮಾಡಿರುವುದು:	573	545	570
ಖಾಲಿ ಇರುವುದು:	267	308	298

ವಿಷಯ: ತುಳು ಸಾಹಿತ್ಯ ಅಕಾಡಮಿ ಕುರಿತು.

2743 (3433)

ಶ್ರೀ ಕೆ.ಜಯರಾಮರೆಡ್ಡಿ (ಉಳ್ಳಾಲ): ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಯಾವತ್ತಿನಿಂದ ಕಾರ್ಯ ಮಾಡುತ್ತದೆ?

ಆ) ಸದರಿ ಅಕಾಡೆಮಿಯ ಕಾರ್ಯಕ್ರಮ ಮತ್ತು ಕಾರ್ಯಕ್ಷೇತ್ರಗಳಾವುವು?

ಇ) ಸದರಿ ಅಕಾಡೆಮಿಯ ರೂಪರೇಷೆಗಳೇನು?

ಈ) ರಾಜ್ಯ ಸರ್ಕಾರ ತುಳು ಸಾಹಿತ್ಯ ಅಕಾಡೆಮಿಗೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ?

ಉ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲೆಗಳಾಗಿ ವಿಂಗಡಿಸಿದಾಗ ಒಂದು ಜಿಲ್ಲೆಯಲ್ಲಿ ಶೇ 90 ರಷ್ಟ ತುಳು ಭಾಷೆ ಮಾತನಾಡುವುದರಿಂದ ಈ ಜಿಲ್ಲೆ ತುಳು ಜಿಲ್ಲೆ ಎಂದು ನಾಮಕರಣ ಮಾಡಲು ಸರ್ಕಾರವನ್ನು ವಿನಂತಿಸಲಾಗಿದೆಯೇ? ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು?

ಊ) ತುಳು ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಉಳ್ಳಾಲದಲ್ಲಿ ''ರಾಣಿ

ಅಬ್ಬಕ್ಕ'' ನಾಡ ಉತ್ಸವ ಜರುಗಲಿದ್ದು, ರಾಜ್ಯಸರ್ಕಾರ ಈ ಕಾರ್ಯಕ್ರಮಕ್ಕೆ ಎಷ್ಟು ಅನುದಾನ ನೀಡಲಿದೆ?

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) 1994 ರಿಂದ.

ಆ) ಕಾರ್ಯಕ್ರಮಗಳು:

1) ತುಳು ಸಾಹಿತ್ಯ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಶೋಧನೆಗೆ ಉತ್ತೇಜನ.

2) ತುಳು ಭಾಷೆ ಗ್ರಂಥಗಳ ಸಂಗ್ರಹಣೆ ಮತ್ತು ಪ್ರಕಟಣೆ

3) ತುಳು ಭಾಷೆಗಳ ಸಂಸ್ಕೃತಿ ಸಂಪ್ರದಾಯಗಳ ಉತ್ಸವ ನಡೆಸುವುದು.

4) ತುಳು ಸಾಹಿತ್ಯ, ಕ್ಷೇತ್ರದಲ್ಲಿ ಹೆಸರು ಮಾಡಿದ ಸಾಹಿತಿ ಕವಿ ಕಲಾವಿದರುಗಳನ್ನು ಗುರುತಿಸಿ ಸನ್ಮಾನ, ಪ್ರಶಸ್ತಿ ಹಾಗೂ ಅವರ ಕೃತಿಗಳಿಗೆ ಬಹುಮಾನ ನೀಡುವುದು.

5) ತುಳು ಸಾಂಸ್ಕೃತಿಕ ಸಂಘಟನೆಗಳಿಗೆ ಧನಸಹಾಯ ನೀಡುವುದು.

6) ತುಳು ಸಾಹಿತ್ಯ ಕ್ಷೇತ್ರದಲ್ಲಿ ಅರ್ಹ ಅಭ್ಯರ್ಥಿಗಳಿಗೆ ವಿದ್ಯಾರ್ತಿ ವೇತನ ನೀಡುವುದು.

7) ತುಳು ಅಕಾಡೆಮಿಯ ಕಾರ್ಯಕ್ಷೇತ್ರ ಮಂಗಳೂರು (ದ.ಕ.ಜಿಲ್ಲೆ) ಮತ್ತು ರಾಜ್ಯ ವ್ಯಾಪ್ತಿ ಇರುತ್ತದೆ. ಆದರೂ ರಾಜ್ಯದ ಹೊರಭಾಗದಲ್ಲಿರುವ ಸಾಹಿತಿ: ಕಲಾವಿದರುಗಳನ್ನು ಅಕಾಡೆಮಿಯ ಸಾಹಿತ್ಯದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುತ್ತದೆ.

ಇ) (ಅ) ದಲ್ಲಿನ ಉತ್ತರ ಅನ್ವಯಿಸುತ್ತದೆ.

ಈ) 1) 1994-95ನೇ ಸಾಲಿನಲ್ಲಿ 10.00 ಲಕ್ಷ ರೂ.

2) 1995-96ನೇ ಸಾಲಿನಲ್ಲಿ 6.00 ಲಕ್ಷ ರೂ.

3) 1996-97ನೇ ಸಾಲಿನಲ್ಲಿ 9.00 ಲಕ್ಷ ರೂ.

4) 1997-98ನೇ ಸಾಲಿನಲ್ಲಿ 16.00 ಲಕ್ಷ ರೂ.

ಅವಕಾಶ ಮಾಡಲಾಗಿದೆ.

ಉ) ಇಲ್ಲ. ಪುನರ್ ರಚನೆ ನಂತರ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳೆಂದು ನಾಮಕರಣ ಮಾಡಲಾಗಿದೆ.

ಊ) ಈ ವಿಷಯದ ಬಗ್ಗೆ ಸರ್ಕಾರಕ್ಕೆ ಯಾವುದೇ ಪ್ರಸ್ತಾವ ಬಂದಿಲ್ಲ.

ವಿಷಯ: ಧಾರವಾಡ ಜಿಲ್ಲೆಯಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳು.

2744 (3434)

ಶ್ರೀ ಜಗದೀಶ ಶಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪಶುವೈದ್ಯಕೀಯ ಆಸ್ಪತ್ರೆಗಳು ಎಷ್ಟು?

ಆ) ಜಿಲ್ಲೆಯಲ್ಲಿ ಬೇಡಿಕೆ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಇ) ಹೊಸ ಪಶುವೈದ್ಯ ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಈ) ಹುಬ್ಬಳ್ಳಿ ಪಶುವೈದ್ಯ ಆಸ್ಪತ್ರೆಯು ಬೀಳುವ ಸ್ಥಿತಿಯಲ್ಲಿದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ದುರಸ್ತಿಗಾಗಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೊಪನಾ ರಾಜ್ಯ ಸಚಿವರು):

ಅ) ಪಶು ಆಸ್ಪತ್ರೆ = 20

ಪಶು ಚಿಕಿತ್ಸಾಲಯ: 48+6 = +54

ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ. 152+7 = 159

233

ಆ) ಜಿಲ್ಲೆಗೆ ಒಟ್ಟು 203 ಪಶುವೈದ್ಯ ಆಸ್ಪತ್ರೆಗಳ ಅವಶ್ಯಕತೆ ಇರುತ್ತದೆ.

ಇ) 1997-98ನೇ ಸಾಲಿನಲ್ಲಿ ಯಾವುದೇ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಆಸ್ಪತ್ರೆಯ ಕಟ್ಟಡ ಸುಸ್ಥಿತಿಯಲ್ಲಿರುತ್ತದೆ.